ಬಸವಣ್ಣನಂಥವರು'. ಇಷ್ಟು ಸಾಕು, ಅವರ ಗೆಳೆತನದ ಸಂಘಟನೆಗೆ, ಅದರ ಸಿದ್ಧಿಗೆ, ಅನುಭಾವಿಕ ಆದರ್ಶಕ್ಕೆ! ಈ ಗುಣಗಳೆಲ್ಲ 'ಗೆಳೆಯರ ಗುಂಪಿನ' ಆದರ್ಶಗಳಾಗಿದ್ದವು.

- **ಬೇಂದ್ರೆ ಮತ್ತು ಹಲಸಂಗಿ ಚೆನ್ನಮಲ್ಲಪ್ಪ(ಮಧುರಚೆನ್ನ)ನವರ ನಡುವಿನ 'ಸಖ್ಯಯೋಗ'ದ ಸ್ವರೂಪ, ಅದು ಬೆಸೆದ ಬಾಂಧವ್ಯ, ನಡೆದ ದಾರಿ ಮತ್ತು ಮುಟ್ಟಿದ ಗುರಿಯ ಬಗ್ಗೆ ಕೆಲವು ವಿಚಾರಗಳನ್ನು ಹೇಳ್ತೀರಾ?**

ಲೌಕಿಕ ಬದುಕನ್ನು ನಡೆಸುವ, ಸಮಾನ ಮನೋಧರ್ಮದ ಇಬ್ಬರು ಒಂದೇ ಆದರ್ಶಕ್ಕೆ ಬದ್ಧರಾಗಿ ನಡೆದಾಗ ಪರಸ್ಪರ ಮೈತ್ರಿ ಉಂಟಾಗುವುದು ಸಹಜ. ಸಂಬಂಧ ಗಾಢವಾಗುತ್ತ ಹೋದ ಹಾಗೆ ಅದು ಕೇವಲ ಮೈತ್ರಿ ಅಥವಾ ಗೆಳೆತನವಾಗಿ ಉಳಿಯುವುದಿಲ್ಲ. ಆ ರೀತಿ ಬೇರೆ ಆಗದ ಹಾಗೆ ಬೆಸೆದುಕೊಳ್ಳುವುದೇ 'ಸಖ್ಯಯೋಗ'. ಮಧುರಚೆನ್ನರು ಮತ್ತು ಬೇಂದ್ರೆಯವರ ನಡುವೆ ಇದ್ದದ್ದು ಅಂಥ 'ಸಖ್ಯಯೋಗ'. ಅದು ಅಸಾಧಾರಣ 'ಸಖ್ಯಯೋಗ'. ಬೇಂದ್ರೆಯವರು 'ನೆನಪು' ಕವಿತೆಯಲ್ಲಿ:'

*ಮಧುರಗೀತ'ವ ಹಾಡಿ 'ನನ್ನ ನಲ್ಲ'ನ ಒಲಿಸಿ*
*ಹಲಸಂಗಿ ನಾಡಿನಲ್ಲಿ ನೆಲಿಸಿ ನಿಂತ*
*ನನ್ನ 'ಚೆನ್ನ'ನಿಗೆಣೆಯ ಗೆಣೆಯರಾರಾರಿಹರು*
*ಅವನೆ. ಅವನಿಗು ಹೆಚ್ಚು ಅವನಿಗಿಂತ*

ಎಂದಿದ್ದಾರೆ. ಇದಕ್ಕೂ ಪೂರ್ವದ ಕವಿತೆಯಲ್ಲಿ :

*ಇಂದಿನೀ ಗೆಳೆತನವು ಹಿಂದಿನಿಂದಲೆ ಬಂತು*
*ಮುಂದೆ ಜನ್ಮಾಂತರದಿ ಸಾಗಿ ಸಾಗಿ*
*ಹೊಂದಿರುವ ಪಕಳೆಗಳ ಹಿಂದೆ ಕೇಸರದಿಂದ*
*ನೇಕ ಬೀಜದ ಏಕ ಫಲವು ಆಗಿ.*

ಇದು 'ಸಂಚಯ' ಎಂಬ ಸಂಗ್ರಹದಲ್ಲಿದೆ. ಈ ಎರಡು ಪದ್ಯಗಳಲ್ಲಿ ಅವರ 'ಸಖ್ಯಯೋಗ'ದ ಗುಟ್ಟು ಅಡಗಿದೆ. ಬೇಂದ್ರೆ ಮತ್ತು ಮಧುರಚೆನ್ನರಿಬ್ಬರೂ ಸಖ್ಯಯೋಗಿಗಳಾಗಿ ತಮ್ಮ ವ್ಯಕ್ತಿತ್ವಗಳಿಗೆ ಒಂದು ಹೊಸ ಆಯಾಮವನ್ನು ತಂದುಕೊಂಡವರು. ಅವರು ಪರಸ್ಪರರ ನಿಲುವುಗಳನ್ನು ಕುರಿತು ಕವಿತೆಗಳನ್ನು ಬರೆದರು. ಬೇಂದ್ರೆಯವರು ಮಧುರಚೆನ್ನರನ್ನು ಕುರಿತು ಬರೆದ, ಮೇಲೆ ಉಲ್ಲೇಖಿಸಿದ ಕವಿತೆಗಳು ಅವರ ಸಖ್ಯಯೋಗದ ವ್ಯಾಖ್ಯೆಗಳಂತಿವೆ. ಹಾಗೆಯೇ ಮಧುರಚೆನ್ನರೂ ಬೇಂದ್ರೆಯವರನ್ನು ಕುರಿತು ಎರಡು ಪದ್ಯಗಳನ್ನು ಬರೆದಿದ್ದಾರಲ್ಲದೆ, ಅವರನ್ನು ತಮ್ಮ 'ಅಂತರಂಗದ ಅಣ್ಣಯ್ಯ' ಎಂದು ಹೇಳಿಕೊಂಡಿದ್ದಾರೆ. ಒಂದು ಸೋಜಿಗದ ಸಂಗತಿಯೆಂದರೆ, ಇಬ್ಬರ ತಾಯಂದಿರ ಹೆಸರೂ 'ಅಂಬವ್ವ' ಎಂದು ಒಂದೇ ಆಗಿರುವುದು!! ಶ್ರೀಮಾತಾರವಿಂದರ ಭಕ್ತಿಯ ನೆರಳು ಅವರ ಸಖ್ಯಯೋಗಕ್ಕೆ ಮತ್ತಷ್ಟು ಗಾಢವಾದ ಬೆಸುಗೆ ಹಾಕಿತು.

- **ಅರವಿಂದರು ಮತ್ತು ಶ್ರೀಮಾತಾ ಅವರು ನಿಮ್ಮ ಅಂತರಂಗವನ್ನು ಪ್ರವೇಶಿಸಿ, ಅನುಭಾವದ ಆಳಕ್ಕೆ ಕರೆದುಕೊಂಡು ಹೋದದ್ದರ ಬಗ್ಗೆ ಮತ್ತು ಅನಂತರ ನೀವು ಆ ಮಾರ್ಗದಲ್ಲಿ ಅತ್ಯಂತ ನೈಷ್ಠಿಕವಾಗಿ ಕ್ರಮಿಸಿದ್ದರ ಬಗ್ಗೆ ವಿವರಿಸ್ತೀರಾ?**